ಆ) ಉನ್ನತೀಕರಿಸಲಾದ ಭೂಮಿ-3 ಸಾಫ್ಟ್‌ವೇರ್ ಅವತರಣಿಕೆಯಲ್ಲಿ ಏಕ ಕಾಲದಲ್ಲಿ ಮ್ಯುಟೇಷನ್‌ನ್ನು ಮಾಡಲು ಅನುವು ಮಾಡಿದೆ. ಈ ಸಾಫ್ಟ್‌ವೇರ್ ಹಿಂದಿನ ಸೀಮಿತವನ್ನು ಅಳಿಸಲಾಗುವುದು ಇದನ್ನು 40 ತಾಲ್ಲೂಕುಗಳಲ್ಲಿ ಅಳವಡಿಸಲಾಗಿದೆ. ಉಳಿದ ತಾಲ್ಲೂಕುಗಳಲ್ಲಿಯೂ ಸಹ ಈ ಅವತರಣಿಕೆಯನ್ನು 2-3 ತಿಂಗಳ ಅವಧಿಯಲ್ಲಿ ಅಳವಡಿಸಲಾಗುವುದು.

**ಧಾರವಾಡ ಜಿಲ್ಲೆಯ ಗುಂಗಾರಗಟ್ಟಿಯಲ್ಲಿ ಸಫಾರಿ ಮಾಡುವುದು**

604 (995) ಶ್ರೀ ಶ್ರೀ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಸಫಾರಿ ಮಾಡುವ ಗುಂಗಾರಗಟ್ಟಿ ಕಾರ್ಯ ಪ್ರಾರಂಭಿಸಲಾಗಿದೆಯೇ; ಇದು ಈಗ ಯಾವ ಹಂತದಲ್ಲಿದೆ;

ಆ) ಸದರಿ ಸಫಾರಿಯಲ್ಲಿ ಎಷ್ಟು ಅರಣ್ಯ ಭೂಮಿ ಬರುವುದು;

ಇ) ಸದರಿ ಸಫಾರಿಯಲ್ಲಿ ಯಾವ ಯಾವ ವನ್ಯ ಪ್ರಾಣಿಗಳ ಸಂರಕ್ಷಣೆಯ ದೃಷ್ಟಿ ಇಟ್ಟುಕೊಂಡು ಅಭಿವೃದ್ಧಿಪಡಿಸಲಾಗುವುದು;

ಈ) ಉತ್ತರ ಕರ್ನಾಟಕದ ಜನತೆಯ ಉತ್ತಮ ಸಫಾರಿ ಮಾಡುವ ಈ ಯೋಜನೆಯ ಪೂರ್ಣ ವಿವರ ನೀಡುವುದು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ.

**ರಾಜ್ಯದ ರಾಷ್ಟ್ರೀಯ ಹೆದ್ದಾರಿ ನಿರ್ವಹಣೆಗೆ ಎಂಜಿನಿಯರ್‌ಗಳು**

605 (996) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ರಾಷ್ಟ್ರೀಯ ಹೆದ್ದಾರಿ ಕಾರ್ಯಗಳಿಗೆ ನಿಯೋಜಿಸಿರುವ ಎಂಜಿನಿಯರ್‌ಗಳ ಸಂಖ್ಯೆ ಎಷ್ಟು; ಹುದ್ದೆಗಳ ಪ್ರಕಾರ ವಿವರ ಒದಗಿಸುವುದು:

ಆ) ರಾಜ್ಯದಲ್ಲಿ ನಡೆದಿರುವ ಪ್ರತಿಯೊಂದು ಹೆದ್ದಾರಿ ಕಾರ್ಯದ ವಿವರಗಳು ಆದರಲ್ಲಿ ಖರ್ಚು ಮಾಡುವ ವಿವರ ಹಾಗೂ ಪ್ರತಿ ಕಂಟ್ರಾಕ್ಟರಗಳ ಕಾರ್ಯದ ವಿವರ ಮತ್ತು ನೀಡಿರುವ ಹಣದ ಮೊತ್ತ ತಿಳಿಸುವುದು;

ಇ) ಪ್ರತಿಯೊಂದು ಕಾರ್ಯಗಳು ಪ್ರಾರಂಭಿಸಿರುವ ದಿನಾಂಕಗಳು ಮತ್ತು ಪೂರ್ತಿಗೊಳಿಸಬೇಕಾದ ಅವಧಿ ದಿನಾಂಕ ಗುಣಮಟ್ಟದ ಕೆಲಸಗಳ (ಕ್ವಾಲಿಟಿ ಕೆಲಸದ) ಅಳತೆಗೋಲು ತಿಳಿಸುವುದು;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :